ವಿಷಯ: (ii) ಕೋಲಾರದ ಚಿನ್ನದ ಗಣಿಯನ್ನು ಮುಚ್ಚುವುದರಿಂದ ಉದ್ಭವಿಸಿರುವ ಸಮಸ್ಯೆ.

ಶ್ರೀ ಪಿ.ಜಿ.ಆರ್.ಸಿಂಧ್ಯ (ಕನಕಪುರ): ಮಾನ್ಯ ಅಧ್ಯಕ್ಷರೇ, ಒಂದು ವಿಚಾರವನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ಸದನದಲ್ಲಿ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯ ಕುರಿತು ಚರ್ಚೆಯನ್ನು ಮಾಡತಕ್ಕಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಸಹ ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಆ ಆಶ್ವಾಸನೆಯನ್ನು ಈಡೇರಿಸುವ ಮುಂಚಿತವಾಗಿಯೇ ನಿನ್ನೆಯ ದಿನ ಮಾನ್ಯ ಮುಖ್ಯಮಂತ್ರಿಯವರು ದೆಹಲಿಗೆ ಹೋದಂಥ ಸಂದರ್ಭದಲ್ಲಿ ಕೇಂದ್ರ ಸಚಿವರನ್ನು ಭೇಟಿ ಮಾಡಿ ಕೋಲಾರದ ಚಿನ್ನದ ಗಣಿಯನ್ನು ಮುಚ್ಚತಕ್ಕಂತ ವಿಚಾರದಲ್ಲಿ, ಇದನ್ನು ಮುಚ್ಚಬಾರದು, ರಾಜ್ಯ ಸರಕಾರದ ಹಾಗೂ ಕೋಲಾರ ಜಿಲ್ಲೆಯ ಕೆಜಿಎಫ್‌ನಲ್ಲಿರುವ ಜನತೆಯ ಹಿತದೃಷ್ಟಿಯಿಂದಾಗಿ ಇದನ್ನು ಮುಚ್ಚಬಾರದು ಎಂದು ಕೇಂದ್ರ ಸರಕಾರದ ಮಂತ್ರಿಯವರಾದ ಮಾನ್ಯ ಶ್ರೀ ಕುಮಾರ ಮಂಗಳಂರವರನ್ನು ಭೇಟಿ ಮಾಡಿ ಒತ್ತಾಯಿಸಿದ್ದಾರೆಂದು ವರದಿಯಾಗಿದೆ. ಇದೇ ಸಂದರ್ಭದಲ್ಲಿ ಕೇಂದ್ರ ಸರಕಾರದ ಮಂತ್ರಿಯವರು ರಾಜ್ಯ ಸರ್ಕಾರಕ್ಕೆ ಕೆಲವು ಕ್ರಮಗಳನ್ನು ಕೂಡ ಸೂಚನೆ ಮಾಡಿದ್ದಾರೆ. ಈ ದೃಷ್ಟಿಯಲ್ಲಿ ನಮ್ಮ ಮಾನ್ಯ ಮುಖ್ಯ ಮಂತ್ರಿಯವರು ಮಾಡತಕ್ಕಂಥಾದ್ದು ಒಳ್ಳೆಯ ಕೆಲಸ. ಕೇಂದ್ರ ಸರಕಾರದ ಸಚಿವರನ್ನು ಒತ್ತಾಯ ಮಾಡಿ ವಿಷಯದ ಗಂಭೀರತೆಯನ್ನು ತಿಳಿಸಿಕೊಟ್ಟಿರುವುದು ಒಳ್ಳೆಯ ಕೆಲಸ. ಕೆಜಿಎಫ್‌ನಲ್ಲಿ ಬಹಳ ಜನರು ಆತಂಕದಲ್ಲಿದ್ದಾರೆ. ಕೆಜಿಎಫ್, ಕೋಲಾರ ಮತ್ತು ಬೆಂಗಳೂರಿನ ಜನರು ಸೇರಿ ಒಂದು ದೊಡ್ಡ ಮೆರವಣಿಗೆ ಮಾಡಿ ತಮ್ಮ ಆತಂಕವನ್ನು ವ್ಯಕ್ತ ಮಾಡಿರುವುದು ತಮಗೆಲ್ಲರಿಗೂ ಗೊತ್ತಿರುವ ವಿಚಾರ. ಇಂಥ ಸಂದರ್ಭದಲ್ಲಿ ಮಾನ್ಯ ಕೇಂದ್ರ ಸರಕಾರದ ಸಚಿವರು ಮಾನ್ಯ ಮುಖ್ಯಮಂತ್ರಿಯವರಿಗೆ ಏನು ಭರವಸೆಯನ್ನು ಕೊಟ್ಟಿದ್ದಾರೆ ಎಂಬುದನ್ನು ಸದನಕ್ಕೆ ತಿಳಿಸಬೇಕೆಂಬ ಒಂದು ಒತ್ತಾಯವನ್ನು ನಿಮ್ಮ ಮೂಲಕ ನಾನು ಮಾಡುತ್ತೇನೆ.

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಈ ಒಂದು ವಿಚಾರದಲ್ಲಿ ಸದನದ ಎಲ್ಲಾ ಶಾಸಕರು ಸೇರಿ ಒಂದು ನಿರ್ಣಯ ಮಾಡಿ ಕೇಂದ್ರ ಸರಕಾರಕ್ಕೆ ಕಳುಹಿಸೋಣ ಎಂದು ಹೇಳಿದ್ದರು. ಅದನ್ನು ಸದನದಲ್ಲಿ ಯಾವಾಗ ತರುತ್ತೀರಿ? ಎಂಬುದನ್ನು ದಯಮಾಡಿ ಹೇಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ಸದಸ್ಯರಾದ ಭಕ್ತವತ್ಸಲಂರವರು ಒಂದು ನಿರ್ಣಯ ಕಳುಹಿಸಿ ಕೊಟ್ಟಿದ್ದಾರೆ. ಈಗ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಟ್ಟ ಮೇಲೆ ಅದನ್ನು ಮೂವ್ ಮಾಡಬೇಕೆ? ಅಥವ ಬೇಡವೆ? ಎಂಬುದನ್ನು ನಿರ್ಧರಿಸೋಣ.

ಶ್ರೀ ಎಸ್.ಎಂ.ಕೃಷ್ಣ: ನಮ್ಮ ರಾಜ್ಯದ ಅತ್ಯಂತ ಪ್ರತಿಷ್ಠಿತವಾದಂಥ ಕೋಲಾರದ ಚಿನ್ನದ ಗಣಿ, ಭಾರತ್ ಗೋಲ್ಡ್ ಮೈನ್ಸ್ ಏನಿದೆ, ಇದನ್ನು ಮುಚ್ಚಬೇಕೆನ್ನುವಂಥ

ದುರದೃಷ್ಟಕರವಾದಂಥ ನಿರ್ಣಯವನ್ನು ಕೇಂದ್ರ ಸರಕಾರ ತೆಗೆದುಕೊಂಡಿರುವುದು ಸಹಜವಾಗಿ ನಮ್ಮ ರಾಜ್ಯದಲ್ಲಿ ಕಳವಳವನ್ನು ತರತಕ್ಕಂಥ ಬೆಳವಣಿಗೆಯಾಗಿದೆ ಎಂದು ನಾನು ಹೇಳಬಯಸುತ್ತೇನೆ. ಈ ವಿಚಾರದಲ್ಲಿ ಉಭಯ ಸದನಗಳಲ್ಲಿ ಒಂದೇ ಒಂದು ದೃಢವಾದ ನಿಲುವನ್ನು ಹೊಂದಿರತಕ್ಕಂಥಾದ್ದನ್ನು ಸರಕಾರವು ಗಮನಿಸಿದ ಹಿನ್ನೆಲೆಯಲ್ಲಿ ನಿನ್ನೆ ನಾನು ದೆಹಲಿಯಲ್ಲಿದ್ದಾಗ ನಮ್ಮ ರಾಜ್ಯದ ಹಲವಾರು ಸಂಸತ್ ಸದಸ್ಯರ ಜೊತೆಯಲ್ಲಿ ಕೇಂದ್ರ ಸರಕಾರದ ಗಣಿ ಮಂತ್ರಿಗಳಾದಂಥ ಮಾನ್ಯ ಕುಮಾರ ಮಂಗಳಂರವರನ್ನು ಭೇಟಿ ಮಾಡಿ ಇಲ್ಲಿ ಕೆಲಸ ಮಾಡತಕ್ಕಂಥ ಸುಮಾರು 4,750 ಜನ ಕಾರ್ಮಿಕರು ಏನಿದ್ದಾರೆ ಅವರ ಭವಿಷ್ಯ ಜೀವನ ಶೂನ್ಯವಾಗತಕ್ಕ ಈ ನಡವಳಿಕೆ ಏನಿದೆ, ಇದನ್ನು ಪುನರ್‌ಪರಿಶೀಲನೆ ಮಾಡಬೇಕು ಎನ್ನುವ ರಾಜ್ಯ ಸರ್ಕಾರ ಮತ್ತು ರಾಜ್ಯ ಸಂಸತ್ ಸದಸ್ಯರಗಳ ಒಟ್ಟಾರೆ ಅಭಿಪ್ರಾಯವನ್ನು ಆಗ್ರಹಪೂರ್ವಕವಾಗಿ ಮಾನ್ಯ ಮಂತ್ರಿಗಳ ಮುಂದೆ ನಾವು ಮಂಡಿಸಿದ್ದೇವೆ. ಈ ಚಿನ್ನದ ಗಣಿಯು ಯಾವ ಪ್ರಮಾಣದಲ್ಲಿ ಚಿನ್ನವನ್ನು ಗಣಿ ಮಾಡಬೇಕಾಗಿತ್ತೋ ಆ ಪ್ರಮಾಣದಲ್ಲಿ ಚಿನ್ನವು ಅಲ್ಲಿ ಒದಗದೇ ಇರತಕ್ಕದ್ದರಿಂದ ಕಳೆದ ನಾಲ್ಕಾರು ವರ್ಷಗಳಲ್ಲಿ ಈ ಚಿನ್ನದ ಗಣಿಯು ಯಾವರೀತಿ ಕೆಲಸ ಮಾಡಬೇಕೋ ಆ ರೀತಿ ಕೆಲಸ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ವರ್ಷ ವರ್ಷ ನಷ್ಟವನ್ನೇ ಅನುಭವಿಸಿಕೊಂಡು ಬಂದಿರತಕ್ಕ ಈ ಚಿನ್ನದ ಗಣಿಯ ಬಗ್ಗೆ ಹಿಂದಿನ ವರ್ಷಗಳಲ್ಲಿ ಹಲವಾರು ಸಾರಿ ಕೂಡ ಇದರ ಭವಿಷ್ಯದ ಬಗ್ಗೆ ಕೇಂದ್ರ ಸರ್ಕಾರದವರು ಚಿಂತನೆಯನ್ನು ಮಾಡಿದ್ದಾರೆ. ನಾವು ಅವರಲ್ಲಿ ಪ್ರತಿಪಾದನೆ ಮಾಡಿದ ಮುಖ್ಯವಾದ ವಿಚಾರವೇನೆಂದರೆ, ಈ ಚಿನ್ನದ ಗಣಿಯನ್ನು ಮುಚ್ಚುವ ವಿಚಾರ ಸಂಸತ್ ಸಮಿತಿಯೊಂದರ ಮುಂದೆ ಚರ್ಚೆಯಾಗಿದೆ. ಆ ಸಂಸತ್ ಸಮಿತಿಯ ಸದಸ್ಯರುಗಳು ಕೂಡ ಇದರ ಬಗ್ಗೆ ಕೆಲವು ಪರಿಣಿತರ ಅಭಿಪ್ರಾಯಗಳನ್ನು ಪಡೆದಿದ್ದಾರೆ. ಆ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದವರು ಇದರ ಬಗ್ಗೆ ಪುನರ್‌ವಿಮರ್ಶೆ ಮಾಡಬೇಕೆಂದು ನಾವು ಕೇಳಿದ್ದೇವೆ ಮಾನ್ಯ ಮಂತ್ರಿಗಳವರ ತಂದೆಯವರು ಕೂಡ 1972ನೇ ಇಸವಿಯಲ್ಲಿ ಗಣಿ ಮಂತ್ರಿಗಳಾಗಿದ್ದರು. ಅವರು ಮಾನ್ಯ ಮೋಹನ್‌ಕುಮಾರ್ ಮಂಗಳಂ. ಆಗ ನಾನು ಈ ರಾಜ್ಯದಲ್ಲಿ ಕೈಗಾರಿಕಾ ಸಚಿವನಾಗಿದ್ದೆ. ಆದ್ದರಿಂದ, ಈ ಇತಿಹಾಸವನ್ನು ಅವರಿಗೆ ತಿಳಿಸಿದಾಗ ಇದನ್ನು ಅವರು ಪುನರ್-ಪರಿಶೀಲನೆ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ, ಒಂದು ಷರತ್ತು ಇದೆ. ಆ ಷರತ್ತು ಏನೆಂದರೆ, ಇವತ್ತು 4750 ಜನ ಕಾರ್ಮಿಕರು ಅಲ್ಲಿದ್ದಾರೆ. ಅಷ್ಟು ಜನರನ್ನು ನಾವು ಮುಂದುವರಿಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಗಣಿ ಉದ್ದಿಮೆಯು ಮುಂದುವರಿಯಬೇಕಾಗಿದ್ದರೆ ಕನಿಷ್ಠ 2700 ಜನರನ್ನು ವಾಲೆಂಟರಿ ರಿಟೈರ್‌ಮೆಂಟ್ ಸ್ಕೀಮ್ ಹಿನ್ನೆಲೆಯಲ್ಲಿ ಅವರು ಬಿಟ್ಟುಕೊಡುವುದಕ್ಕೆ ಸಿದ್ಧರಾಗಿದ್ದರೆ, ವಯಸ್ಸಾಗಿರತಕ್ಕವರು, ಅಥವಾ ರಿಟೈರ್‌ಮೆಂಟ್‌ಗೆ ಹತ್ತಿರದಲ್ಲಿರತಕ್ಕಂಥವರು, ಇಂಥವರು ಈ ವಾಲೆಂಟರಿ ರಿಟೈರ್‌ಮೆಂಟ್ ಸ್ಕೀಮನ್ನು ಅನ್ವಯಿಸಿಕೊಂಡು ಅದರಿಂದ ಅವರು ರಿಟೈರ್ ಆಗಲಿಕ್ಕೆ ಒಪ್ಪಿದರೆ ನಾವು ಇದರ ಎಕಾನಾಮಿಕ್ ವಯಬಿಲಿಟಿಯನ್ನು

ಗಮನಿಸಿ ಸಂಬಂಧಪಟ್ಟಂಥ ಪರಿಣಿತರನ್ನು ಕರೆಸಿ ನಾನು ಇನ್ನೊಂದು ಸಭೆಯನ್ನು ಮುಂದಿನ ತಿಂಗಳು ಮೊದಲನೇ ಭಾಗದಲ್ಲಿ ಮಾಡುತ್ತೇನೆ ಎನ್ನುವ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಇದರಿಂದ ಉದ್ಭವವಾದ ಒಂದೇ ಒಂದು ಫಲಶೃತಿ ಏನೆಂದರೆ, ಏನು ಅತ್ಯಂತ ಮೇಲ್ಮಟ್ಟದಲ್ಲಿ ಅಂದರೆ ಕೇಂದ್ರ ಸಚಿವಸಂಪುಟದಲ್ಲಿ ಇದರ ಬಗ್ಗೆ ನಿರ್ಣಯವನ್ನು ಮಾಡಿದ್ದಾರೆ, ಆ ನಿರ್ಣಯವನ್ನು ಈ ದಿವಸ ಪುನರ್-ಪರಿಶೀಲನೆ ಮಾಡತಕ್ಕಂಥ ಒಂದು ಇಂಗಿತವನ್ನು, ನಿರ್ಣಯವೆಂದು ನಾನು ಹೇಳಲಾರೆ, ಆ ಒಂದು ಇಂಗಿತವನ್ನು ಮಾನ್ಯ ಸಚಿವರು ವ್ಯಕ್ತಪಡಿಸಿರುವುದು ನಮಗೆ ಸ್ವಲ್ಪಮಟ್ಟಿಗೆ ಸಮಾಧಾನವನ್ನು ತಂದಿದೆ. ಇದಕ್ಕೆ ಮಾನ್ಯ ಕೇಂದ್ರ ಗಣಿ ಸಚಿವರನ್ನು ನಾನು ಮನಸಾರೆ ಅಭಿನಂದಿಸಿ, ಈ ದಿಕ್ಕಿನಲ್ಲಿ ಈ ಉದ್ದಿಮೆಯನ್ನು ರಕ್ಷಣೆ ಮಾಡುವುದಕ್ಕೆ ತಾವು ಎಲ್ಲಾ ವಿಧವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಹೇಳಿ ಮತ್ತೊಮ್ಮೆ ಈ ಸದನದ ಪರವಾಗಿ ಅವರನ್ನು ನಾನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಸರ್ಕಾರವನ್ನು ಈ ವಿಚಾರದಲ್ಲಿ ನಾವು ಅಭಿನಂದಿಸುತ್ತೇವೆ. ಅವರು ತಕ್ಷಣ ಈ ಸದನದ ವಿಚಾರವನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದು ಇದನ್ನು ಮಾಡಿದ್ದಾರೆ. ಅವರ ವೈಯಕ್ತಿಕವಾದ ಸಂಬಂಧಗಳನ್ನು ಇದಕ್ಕೋಸ್ಕರ ಉಪಯೋಗಿಸಿಕೊಂಡು ರಾಜ್ಯದ ಇಡೀ ಆ ಒಂದು ವರ್ಕಿಂಗ್ ಕ್ಲಾಸ್ ಜನ ಸಮುದಾಯದ ಒಂದು ಸಮಸ್ಯೆ ಏನಿತ್ತು, ಅವರಿಗೆ ಸ್ಪಂದಿಸಿರುವುದಕ್ಕೆ ನಾನು ಅಭಿನಂದಿಸುತ್ತೇನೆ. ಇದು ಮೇ, 16ನೇ ತಾರೀಖು, ಬಿಐಎಫ್ಆರ್ ಮುಂದೆ ಬರುತ್ತದೆ ಎಂದು ನಾವು ಕೇಳಿದ್ದೇವೆ. ಈ ಮಧ್ಯೆ ಮಾನ್ಯ ಮುಖ್ಯಮಂತ್ರಿಯವರು ಸಂಬಂಧಪಟ್ಟ ಆಡಳಿತ ವರ್ಗದವರನ್ನು ಕರೆದು ಈ ವಿಚಾರಗಳನ್ನು ಬಿಐಎಫ್ಆರ್ ಮುಂದೆ ಪ್ರಸ್ತಾಪವಾಗುವ ಹಾಗೆ ಮಾಡಿದರೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಬಿಐಎಫ್ಆರ್‌ನವರು ಒಂದು ತೀರ್ಮಾನವನ್ನು ತೆಗೆದುಕೊಳ್ಳತಕ್ಕ ಸಂಭವಗಳೂ ಇವೆ. ಅದರಿಂದಾಗಿ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆನ್ನುವ ವಿಚಾರವನ್ನು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸಲಿಕ್ಕೆ ಬಯಸುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೇ ನಮ್ಮ ನಿಯೋಗದಲ್ಲಿ ಎಲ್ಲಾ ಪಕ್ಷದ ಸಂಸತ್ ಸದಸ್ಯರುಗಳು ಕೂಡ ನನ್ನ ಜೊತೆಯಲ್ಲಿ ಮಾನ್ಯ ಸಚಿವರನ್ನು ಭೇಟಿ ಮಾಡಲಿಕ್ಕೆ ಬಂದಿದ್ದರು. 14ನೇ ತಾರೀಖು ಇದಕ್ಕೊಂದು ಡೆಡ್‌ಲೈನ್ ಇದೆ. ಇದು ಬಿಐಎಫ್ಆರ್ ಮುಂದೆ ಹೋಗಿದೆ. ನಿನ್ನೆ ನಡೆದ ಈ ಸಭೆಯ ಹಿನ್ನೆಲೆ ಮತ್ತು ಈ ಸಭೆಯಿಂದಾಗಿ ಹಲವಾರು ಟೈಂ ಟೇಬಲ್‌ನಲ್ಲಿ ಬದಲಾವಣೆಗಳಾಗಬಹುದು. ಅದಕ್ಕೆ ಸ್ಪಂದಿಸಿ ಸೂಕ್ತವಾದ ರೀತಿಯಲ್ಲಿ ನಾವು ಇದರ ಬಗ್ಗೆ ವ್ಯವಹಾರವನ್ನುಮಾಡುತ್ತೇವೆ.

ಶ್ರೀ ಕೆ.ಶ್ರೀನಿವಾಸಗೌಡ ಕುದವನಹಳ್ಳಿ: ಮಾನ್ಯ ಅಧ್ಯಕ್ಷರೇ, ಮಾನ್ಯ

ಮುಖ್ಯಮಂತ್ರಿಯವರು ಇಂಥ ಒಳ್ಳೆಯ ಕಾರ್ಯಕ್ರಮವನ್ನು ಮಾಡಿದ್ದಾರೆ. ಇವತ್ತು ಆ ಉದ್ಯಮವೇನಾದರೂ ಅಲ್ಲಿ ಮುಚ್ಚಿದ್ದೇ ಆದರೆ ಕೋಲಾರದಲ್ಲೆಲ್ಲಾ ದರೋಡೆಗಳಾಗುವ ಪರಿಸ್ಥಿತಿ ಇತ್ತು. ಇವತ್ತು ಅದಕ್ಕೆ ಅಡ್ಡಹಾಕಿ, ಇಂಥ ಒಳ್ಳೆಯ ಕೆಲಸವನ್ನು ಮಾಡುವ ಚಿಂತನೆ ಮಾಡಿ ಕೇಂದ್ರ ಸರ್ಕಾರದ ಮಂತ್ರಿಗಳನ್ನು ಒಲಿಸುವುದರ ಮೂಲಕ ಮತ್ತೆ ನಿಜವಾಗಿಯೂ ಅದಕ್ಕೆ ಪುನರ್ ಜೀವವನ್ನು ಕೊಟ್ಟಿದ್ದೀರಿ. ಆದರ ಬಗ್ಗೆ ಇವತ್ತು ಪತ್ರಿಕೆಗಳಲ್ಲಿ ಕೂಡ ಬಂದಿದೆ. ಯಾವುದೋ ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ಓದಿದೆ. ತಾವು ಅಲ್ಲಿಗೆ ಹೋಗಿ ಬಂದ ಮೇಲೆ ಈ ರೀತಿ ಪತ್ರಿಕೆಗಳಲ್ಲಿ ಬಂದಿದೆ. ಇದು ನಿಜವಾಗಿಯೂ ಸಂತೋಷದ ವಿಷಯವೆಂದು ಹೇಳಿ ನಾನು ಜಿಲ್ಲೆಯ ಪರವಾಗಿ ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಯನ್ನು ಸಲ್ಲಿಸುವುದಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರು: ಮಾನ್ಯ ಭಕ್ತವತ್ಸಲಂರವರು ಕೂಡ ಒಂದು ರೆಸಲ್ಯೂಷನನ್ನು ಕಳುಹಿಸಿದ್ದಾರೆ. ಅದನ್ನು ತೆಗೆದುಕೊಳ್ಳಬೇಕೊ? ಬೇಡವೋ? ಎನ್ನುವುದರ ಬಗ್ಗೆ ನಾವು ತೀರ್ಮಾನ ಮಾಡಬೇಕಾಗಿದೆ.

ಶ್ರೀ ಎಸ್.ಎಂ.ಕೃಷ್ಣ: ಒಟ್ಟಾರೆ ರಾಜ್ಯದ ಪರವಾಗಿ, ಮತ್ತು ಈ ಎರಡೂ ಸದನಗಳ ಪರವಾಗಿ ಮಾನ್ಯ ಸಚಿವರಿಗೆ ನಾವು ಮನದಟ್ಟು ಮಾಡಿಕೊಟ್ಟಿದ್ದೇವೆ. ಇಡೀ ರಾಜ್ಯ ಒಕ್ಕೊರಲಿನಿಂದ ಇದರ ಬಗ್ಗೆ ತನ್ನ ಕಳಕಳಿಯನ್ನು ವ್ಯಕ್ತಮಾಡುತ್ತದೆ.

ಶ್ರೀ ಬಿ.ಸೋಮಶೇಖರ್: ಇದಕ್ಕೆ ಶಕ್ತಿ ತುಂಬುವುದಕ್ಕೋಸ್ಕರ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳಾದ ತಾವು ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಪ್ರಾಮಾಣಿಕವಾಗಿ ತೆಗೆದುಕೊಂಡಿದ್ದೀರಿ.

ಅಧ್ಯಕ್ಷರು: ಇದರ ಬಗ್ಗೆ ಮುಂದಿನವಾರ ತೆಗೆದುಕೊಳ್ಳೋಣ.